# ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ

(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)

ಸಿ.ಐ.ಎನ್:ಯು04010ಕೆಎ2002ಎಸ್‌ಜಿಸಿ030438

ಫೋನ್ : 08192-263616,
ಮೊಬೈಲ್ : 9448279094
ಫ್ಯಾಕ್ಸ್ : 08192-263615
ಇ-ಮೇಲ್ :sedavangere@bescom.co.in

ಅಧೀಕ್ಷಕ ಇಂಜಿನೀಯರ್(ವಿ)ರವರ ಕಛೇರಿ,
ಕಾರ್ಯ ಮತ್ತು ಪಾಲನಾ ವೃತ್ತ, ಬೆವಿಕಂ,
ಹದಡಿ ರಸ್ತೆ,
ದಾವಣಗೆರೆ-577002.


ಸಂಖ್ಯೆ: ದಾ/ಅಇಂ(ವಿ)/ಉಲೆನಿ/ಲೆಅ/ಸಲೆಅ/ಸಿ-6/ ದಿನಾಂಕ: 31 MAR 2017

## ಅಧಿಸೂಚನೆ

ಬೆವಿಕಂ ದಾವಣಗೆರೆ ವೃತ್ತ ವ್ಯಾಪ್ತಿಯಲ್ಲಿ ಬರುವ ಕೆಳಕಂಡ 40 ಗ್ರಾಮ ಪಂಚಾಯಿತಿಗಳಿಗೆ ಮೈಕ್ರೋ ಫೀಡರ್ ಫ್ರಾಂಚಾಯಿಸಿಗಳನ್ನು ವಿದ್ಯುತ್ ಕಂದಾಯ ವಸೂಲಾತಿ ಮಾಡುವುದಕ್ಕೆ ಪ್ರೋತ್ಸಾಹ ಧನದ ಆಧಾರದ ಮೇಲೆ ಗೊತ್ತು ಮಾಡುವುದಕ್ಕಾಗಿ ಅರ್ಜಿಯನ್ನು ಆಹ್ವಾನಿಸಲಾಗಿದೆ.

- ಅರ್ಜಿದಾರರು ಅದೇ ಗ್ರಾಮ ಪಂಚಾಯಿತಿಯ ಅಭ್ಯರ್ಥಿಗಳಾಗಿರಬೇಕು, ಒಂದು ವೇಳೆ ಅದೇ ಗ್ರಾಮ ಪಂಚಾಯಿತಿಯಲ್ಲಿನ ಅಭ್ಯರ್ಥಿಗಳು ಲಭ್ಯವಿಲ್ಲದಿದ್ದ ಸಂದರ್ಭದಲ್ಲಿ ಅದೇ ತಾಲ್ಲೂಕಿನ ಪಕ್ಕದ ಇತರೇ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿನ ಅಭ್ಯರ್ಥಿಯನ್ನು ಆಯ್ಕೆ ಮಾಡುವ ಅಧಿಕಾರವನ್ನು ಕಾಯ್ದಿರಿಸಿಕೊಳ್ಳಲಾಗಿದೆ. ಈ ಮೇಲಿನ ಎರಡೂ ಅರ್ಹತೆಯುಳ್ಳ ಅಭ್ಯರ್ಥಿಗಳು ಲಭ್ಯವಿಲ್ಲದಿದ್ದಲ್ಲಿ ಅದೇ ತಾಲ್ಲೂಕಿನ ಇತರೇ ಗ್ರಾಮ ಪಂಚಾಯಿತಿಯ ಅಭ್ಯರ್ಥಿಯನ್ನು ಪರಿಗಣಿಸುವ ಅಧಿಕಾರವನ್ನು ಕಾಯ್ದಿರಿಸಲಾಗಿದೆ.
- **ವಿದ್ಯಾರ್ಹತೆ: ಕರ್ನಾಟಕ ಸರ್ಕಾರದ ಮಾನ್ಯತೆ ಪಡೆದಿರುವ ವಿದ್ಯಾಲಯಗಳಲ್ಲಿ** ಡಿಪ್ಲೋಮೋ(ವಿದ್ಯುತ್,ಮೆಕ್ಯಾನಿಕಲ್&ಇತರೆ ಬ್ರಾಂಚ್) ಅಥವಾ ಐ.ಟಿ.ಐ/ಐ.ಟಿ.ಸಿ (ವಿದ್ಯುತ್, ಮೆಕ್ಯಾನಿಕಲ್&ಇತರೆ ಬ್ರಾಂಚ್) ಅಥವಾ ದ್ವಿತೀಯ ಪಿ.ಯು.ಸಿ ಯಲ್ಲಿ ತೇರ್ಗಡೆಯಾಗಿರಬೇಕು.
- ಆಯ್ಕೆಯಾದ ಅಭ್ಯರ್ಥಿಯು ಸಂಬಂಧಿಸಿದ ಗ್ರಾಮ ಪಂಚಾಯಿತಿಯ ಮಾಸಿಕ ಬೇಡಿಕೆಯ ಶೇಕಡ 50ರಷ್ಟು ಮೊತ್ತದ, ಗರಿಷ್ಟ ರೂ.1,00,000/- ಮಿತಿಗೊಳಪಟ್ಟು ಬೆಸ್ಕಾಂಗೆ ಬ್ಯಾಂಕ್ ಗ್ಯಾರಂಟಿ ಕೊಡಬೇಕು.
- ಮೈಕ್ರೋ ಫೀಡರ್ ಫ್ರಾಂಚಾಯಿಸಿಗಳಿಗೆ ಸಂಬಂಧಿಸಿದ ಗ್ರಾಮ ಪಂಚಾಯಿತಿಗಳಿಗೆ ನಿಗದಿ ಪಡಿಸಿರುವ ವಸೂಲಾತಿಯ ಗುರಿ ಅನುಸಾರ ವಸೂಲಾತಿಗೆ **ಕನಿಷ್ಟ ಖಚಿತ ಪ್ರೋತ್ಸಾಹ ಧನ ರೂ.12,000/-** ಹಾಗೂ ಹೆಚ್ಚಿನ ವಸೂಲಾತಿಗೆ ಹೆಚ್ಚುವರಿ ಪ್ರೋತ್ಸಾಹ ಧನವನ್ನು ಎಂ.ಓ.ಯು ಒಡಂಬಡಿಕೆಯ ಷರತ್ತುಗಳಿಗೊಳಪಟ್ಟು ನೀಡಲಾಗುವುದು.
- ಅರ್ಜಿ ಸಲ್ಲಿಸುವ ಅಂತಿಮ ದಿನಾಂಕ: **26.04.2017** ಸಂಜೆ: **5.30** ರೊಳಗೆ
- ಹೆಚ್ಚಿನ ವಿವರಗಳಿಗಾಗಿ ಬೆವಿಕಂ.,ನ ವೆಬ್ ಸೈಟ್ : www.bescom.org ಯನ್ನು ನೋಡುವುದು.
- **ವಿ.ಸೂ.** ಈಗಾಗಲೇ ಸಲ್ಲಿಸಿರುವ ಯಾವುದೇ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.

| ಕ್ರ. ಸಂ. | ಗ್ರಾಮ ಪಂಚಾಯಿತಿ ಹೆಸರು | ತಾಲ್ಲೂಕು | ಕ್ರ.ಸಂ. | ಗ್ರಾಮ ಪಂಚಾಯಿತಿ ಹೆಸರು | ತಾಲ್ಲೂಕು |
|---|---|---|---|---|---|
| 1 | ಕಕ್ಕರಗೊಳ್ಳ | ದಾವಣಗೆರೆ | 21 | ತೊಗರೀಕಟ್ಟೆ | ಹರಪನಹಳ್ಳಿ |
| 2 | ಹಳೇಬಾತಿ | | 22 | ಕಡತಿ | |
| 3 | ಕುರ್ಕಿ | | 23 | ಲಕ್ಷ್ಮೀಪುರ | |
| 4 | ಶ್ರೀರಾಮನಗರ | | 24 | ಮದಕರಿಪುರ | ಚಿತ್ರದುರ್ಗ |
| 5 | ಗುತ್ತಿದುರ್ಗ | ಜಗಳೂರು | 25 | ಭೀಮಸಮುದ್ರ | |
| 6 | ಗರಗ | ಚನ್ನಗಿರಿ | 26 | ಅಳಗವಾಡಿ | |
| 7 | ನಲ್ಲೂರು | | 27 | ಲಕ್ಷ್ಮೀಸಾಗರ | |
| 8 | ಇಟಗಿ | | 28 | ಗೊಡಬನಾಳು | |
| 9 | ರುದ್ರಾಪುರ | | 29 | ಬೈದಾಳು | |
| 10 | ದೇವರಬೆಳಕೆರೆ(ಡಿ.ಬಿ.ಕೆರೆ) | ಹರಿಹರ | 30 | ಬಿದರಕೆರೆ | ಹೊಳಲ್ಕೆರೆ |
| 11 | ಕೊಕ್ಕನೂರು | | 31 | ಹರಿಯಬ್ಬೆ | ಹಿರಿಯೂರು |
| 12 | ಉಕ್ಕಡಗಾತ್ರಿ | | 32 | ಸೂರಗೊಂಡನಹಳ್ಳಿ | |
| 13 | ಕ್ಯಾಸನಕೆರೆ | ಹೊನ್ನಾಳಿ | 33 | ಆದಿವಾಲ | |
| 14 | ಹೆಚ್.ಕಡದಕಟ್ಟೆ | | 34 | ಕೆ.ಆರ್.ಹಳ್ಳಿ | |
| 15 | ಕಮ್ಮಾರಘಟ್ಟ | | 35 | ಗನ್ನಾಯಕನಹಳ್ಳಿ | |
| 16 | ಅಡವಿಹಳ್ಳಿ | ಹರಪನಹಳ್ಳಿ | 36 | ಬ್ಯಾಡರಹಳ್ಳಿ | |
| 17 | ಬಾಗಳಿ | | 37 | ನೇರಲಕುಂಟೆ | ಚಳ್ಳಕೆರೆ |
| 18 | ನೀಲಗುಂದ | | 38 | ಕಾಲುವೇಹಳ್ಳಿ | |
| 19 | ತೌಡೂರು | | 39 | ಎನ್.ದೇವರಹಳ್ಳಿ | |
| 20 | ಯಡೀಹಳ್ಳಿ | | 40 | ಸಂತೇಗುಡ್ಡ | ಮೊಳಕಾಲ್ಮೂರು |

ಅಧೀಕ್ಷಕ ಇಂಜಿನಿಯರ್(ವಿ), 31/3
ವಾ, ಕಾ ಮತ್ತು ಪಾ ವೃತ್ತ, ಬೆ.ವಿ.ಕಂ., ದಾವಣಗೆರೆ

# ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ

(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)

**ಅಧಿಸೂಚನೆ**

**"ಬೆವಿಕಂ ಅಡಿಯಲ್ಲಿ ಮೈಕ್ರೋ ಫೀಡರ್ ಫ್ರಾಂಚಾಯಿಸಿ" ರವರನ್ನು ಗೊತ್ತುಮಾಡುವುದು**

ಬೆ.ವಿ.ಕಂ., ವ್ಯಾಪ್ತಿಯಲ್ಲಿ ಬರುವ ಈ ಪ್ರಕಟಣೆಯೊಂದಿಗೆ ಲಗತ್ತಿಸಿರುವ ಪ್ರತಿ ಗ್ರಾಮ ಪಂಚಾಯಿತಿಗೆ ಒಬ್ಬರಂತೆ ಮೈಕ್ರೋ ಫೀಡರ್ ಫ್ರಾಂಚಾಯಿಸಿಯನ್ನು ಬೆವಿಕಂ ತನ್ನ ಕಂದಾಯ ವಸೂಲಾತಿ ಮಾಡುವುದಕ್ಕೆ ಪ್ರೋತ್ಸಾಹ ಧನದ (incentive) ಆಧಾರದ ಮೇಲೆ ಒಂದು ವರ್ಷದ ಅವಧಿಗೆ ಗೊತ್ತು ಮಾಡುವುದಕ್ಕಾಗಿ ಅರ್ಜಿಯನ್ನು ಆಹ್ವಾನಿಸುತ್ತಿದೆ. ಮೈಕ್ರೋ ಫೀಡರ್ ಫ್ರಾಂಚಾಯಿಸಿಯು ತಿಂಗಳಿಗೆ **ಕನಿಷ್ಟ ಖಚಿತ ಪ್ರೋತ್ಸಾಹ ಧನ ರೂ.12,000/-** ಹಾಗೂ ಹೆಚ್ಚಿನ ವಸೂಲಾತಿಗೆ ಹೆಚ್ಚುವರಿ ಪ್ರೋತ್ಸಾಹ ಧನವನ್ನು ಎಂ.ಓ.ಯು ಒಡಂಬಡಿಕೆಯ ಷರತ್ತುಗಳಿಗೊಳಪಟ್ಟು ಪಡೆಯಬಹುದಾಗಿದೆ.

1. **ಅರ್ಹತೆ:-**
   1. ಮೈಕ್ರೋ ಫೀಡರ್ ಫ್ರಾಂಚಾಯಿಸಿಗಾಗಿ ಅರ್ಜಿ ಸಲ್ಲಿಸುವ ಅಭ್ಯರ್ಥಿಯು ಸಂಬಂಧಿಸಿದ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ವಾಸವಾಗಿರುವುದಕ್ಕೆ ಆಧಾರ್ ಕಾರ್ಡ್/ ಚುನಾವಣಾ ಗುರುತಿನ ಚೀಟಿ/ ಡ್ರೈವಿಂಗ್ ಲೈಸನ್ಸ್/ ಆದಾಯ ತೆರಿಗೆ / ಪಾನ್ ಕಾರ್ಡ್/ ರೇಷನ್ ಕಾರ್ಡ್‌ಗಳಲ್ಲಿ ಯಾವುದಾದರೂ ಒಂದು ಗುರುತಿನ ಚೀಟಿ ಒದಗಿಸುವುದು. ಒಂದು ವೇಳೆ ಅದೇ ಗ್ರಾಮ ಪಂಚಾಯಿತಿಯಲ್ಲಿನ ಅಭ್ಯರ್ಥಿಗಳು ಲಭ್ಯವಿಲ್ಲದಿದ್ದ ಸಂದರ್ಭದಲ್ಲಿ ಅದೇ ತಾಲ್ಲೂಕಿನ ಪಕ್ಕದ ಇತರೇ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿನ ಅಭ್ಯರ್ಥಿಯನ್ನು ಆಯ್ಕೆ ಮಾಡುವ ಅಧಿಕಾರವನ್ನು ಕಾಯ್ದಿರಿಸಿಕೊಳ್ಳಲಾಗಿದೆ. ಈ ಮೇಲಿನ ಎರಡೂ ಅರ್ಹತೆಯುಳ್ಳ ಅಭ್ಯರ್ಥಿಗಳು ಲಭ್ಯವಿಲ್ಲದಿದ್ದಲ್ಲಿ ಅದೇ ತಾಲ್ಲೂಕಿನ ಇತರೇ ಗ್ರಾಮ ಪಂಚಾಯಿತಿಯ ಅಭ್ಯರ್ಥಿಯನ್ನು ಪರಿಗಣಿಸುವ ಅಧಿಕಾರವನ್ನು ಕಾಯ್ದಿರಿಸಲಾಗಿದೆ.
   2. ಅಭ್ಯರ್ಥಿಯು ದಿನಾಂಕ: 26.04.2017 ಕ್ಕೆ 18 ರಿಂದ 38 ವಯಸ್ಸಿನ ವಯೋಮಿತಿಯಲ್ಲಿರಬೇಕು.
   3. ಅಭ್ಯರ್ಥಿಗೆ ಸದೃಢ ಆರ್ಥಿಕ ಹಿನ್ನೆಲೆ ಇರಬೇಕು ಮತ್ತು ಸಂಬಂಧಪಟ್ಟ ಗ್ರಾಮ ಪಂಚಾಯಿತಿಯ ಸರಾಸರಿ ಮಾಸಿಕ ಬೇಡಿಕೆಯ ಶೇ.50 ರಷ್ಟು ಮೊತ್ತದ, ಗರಿಷ್ಟ ರೂ. 1,00,000/- ಮಿತಿಗೊಳಪಟ್ಟು ಬೆಸ್ಕಾಂಗೆ ಬ್ಯಾಂಕ್ ಗ್ಯಾರಂಟಿ ಕೊಡಬೇಕು (ಬ್ಯಾಂಕ್ ಗ್ಯಾರಂಟಿಯ ಅವಧಿಯು 12+3 ತಿಂಗಳ ಅವಧಿಯದಾಗಿರಬೇಕು).
2. **<u>ವಿದ್ಯಾರ್ಹತೆ:-</u>ಈ ಕೆಳಕಂಡ ವಿದ್ಯಾರ್ಹತೆಯ ಆದ್ಯತೆಯ ಮೇರೆಗೆ ಅಭ್ಯರ್ಥಿಯನ್ನು ಆಯ್ಕೆ ಮಾಡಲಾಗುವುದು**

   ಕರ್ನಾಟಕ ಸರ್ಕಾರದ ಮಾನ್ಯತೆ ಪಡೆದಿರುವ ವಿದ್ಯಾಲಯಗಳಲ್ಲಿ ಡಿಪ್ಲೋಮೋ(ವಿದ್ಯುತ್,ಮೆಕ್ಯಾನಿಕಲ್&ಇತರೆ ಬ್ರಾಂಚ್) ಅಥವಾ ಐ.ಟಿ.ಐ/ಐ.ಟಿ.ಸಿ (ವಿದ್ಯುತ್, ಮೆಕ್ಯಾನಿಕಲ್&ಇತರೆ ಬ್ರಾಂಚ್) ಅಥವಾ ದ್ವಿತೀಯ ಪಿ.ಯು.ಸಿ ಯಲ್ಲಿ ತೇರ್ಗಡೆಯಾಗಿರಬೇಕು.
3. **<u>ಆಯ್ಕೆ ಸಮಿತಿ:</u>** ಆಯ್ಕೆ ಸಮಿತಿಯು ಈ ಕೆಳಕಂಡ ಸದಸ್ಯರುಗಳನ್ನು ಒಳಗೊಂಡಿರುತ್ತದೆ
   1) ನಿಗಮ ಕಛೇರಿಯಿಂದ ನೇಮಕಗೊಂಡ ನೋಡಲ್ ಆಫೀಸರ್.
   2) ವೃತ್ತದ ಅಧೀಕ್ಷಕ ಇಂಜಿನಿಯರ್(ವಿ).
   3) ವೃತ್ತದ ಉಪ ಲೆಕ್ಕ ನಿಯಂತ್ರಣಾಧಿಕಾರಿ.

3.1.13

ಅಧೀಕ್ಷಕ ಇಂಜಿನಿಯರ್(ವಿ),
ವಾ, ಕಾ ಮತ್ತು ಪಾ ವೃತ್ತ, ಬೆ.ವಿ.ಕಂ., ದಾವಣಗೆರೆ

**ಮೈಕ್ರೋ ಫೀಡರ್ ಫ್ರಾಂಚಾಯಿಸಿಯ ಜವಾಬ್ದಾರಿಗಳು:-**

1. ಭಾಗ್ಯ ಜ್ಯೋತಿ/ಕುಟೀರ ಜ್ಯೋತಿ(ಎಲ್.ಟಿ-1), ಎಲ್.ಟಿ-2, ಎಲ್.ಟಿ-3 , ಎಲ್.ಟಿ-4 (10 ಹೆಚ್.ಪಿ ಗಿಂತ ಮೇಲ್ಪಟ್ಟ ಸ್ಥಾವರಗಳು), ಎಲ್.ಟಿ-5 (40 ಹೆಚ್.ಪಿ ಸಾಮರ್ಥ್ಯದವರೆಗೆ), ಹಾಗೂ ಎಲ್.ಟಿ-6 ಪ್ರವರ್ಗದ ಸ್ಥಾವರಗಳ ಮಾಪಕವನ್ನು ಓದುವುದು, ಬಿಲ್ ವಿತರಣೆ ಮತ್ತು ಕಂದಾಯ ವಸೂಲಾತಿ ಮಾಡುವುದು ಮತ್ತು ವಸೂಲು ಮಾಡಿದ ಹಣವನ್ನು ಅದೇ ದಿನ ಅಥವಾ ನಂತರದ ತಕ್ಷಣದ ಕೆಲಸದ ದಿನಾಂಕದಂದು ನಿಗದಿಪಡಿಸಿರುವ ಬೆವಿಕಂ ಕಛೇರಿ ಅಥವಾ ನಿಯುಕ್ತಿಗೊಳಿಸಿರುವ ಬ್ಯಾಂಕ್‌ನಲ್ಲಿ ಸಂದಾಯ ಮಾಡುವುದು.
2. ದಿನವಹಿ ಮಾಪಕ ಓದುವಿಕೆಯನ್ನು ಪ್ರತೀ ತಿಂಗಳ 15ನೇ ದಿನಾಂಕದೊಳಗಾಗಿ ಪೂರ್ಣಗೊಳಿಸಬೇಕು ಮತ್ತು ಮಾಪಕ ಓದಿದ ಸ್ಥಾವರಗಳ ವಿವರಗಳನ್ನು ಅದೇ ದಿನ ಗಣಕಯಂತ್ರದಲ್ಲಿ ಅಪ್‌ಡೇಟ್ ಮಾಡಿಸಬೇಕು.
3. ವಿದ್ಯುತ್ ಗೆ ಸಂಬಂಧಿಸಿದ ಸ್ಥಳೀಯ ಗ್ರಾಹಕರ ದೂರುಗಳನ್ನು ಸ್ವೀಕರಿಸಿ ಕಂಪನಿಯ ಸಿಬ್ಬಂದಿಯೊಡನೆ ಅವುಗಳನ್ನು ಬಗೆಹರಿಸುವುದು ಹಾಗೂ ಗ್ರಾಹಕರಿಗೆ ಸೇವಾ ಕೇಂದ್ರದ ದೂರವಾಣಿ ಸಂಖ್ಯೆಯನ್ನು ನೀಡುವುದು.
4. ಅನಧಿಕೃತ ವಿದ್ಯುತ್ ಸಂಪರ್ಕವನ್ನು ಸಕ್ರಮಗೊಳಿಸಲು ಸಹಕರಿಸುವುದು ಮತ್ತು ಅಪಾಯಕಾರಿ ಸ್ಥಾವರಗಳ ಸ್ಥಳಗಳನ್ನು ಪತ್ತೆ ಹಚ್ಚಲು ಸಹಕರಿಸುವುದು.
5. ಹಳೆಯ/ಹಾಳಾಗಿರುವ (ಎಂ.ಎನ್.ಆರ್) ಮಾಪಕಗಳನ್ನು ಗುರುತಿಸಿ, ಉತ್ತಮ ಮಾಪಕಗಳಿಗೆ ಬದಲಾಯಿಸಲು ಅನುಕೂಲವಾಗುವಂತೆ ವರದಿಯನ್ನು ಸಂಬಂಧಪಟ್ಟ ಅಧಿಕಾರಿಗಳಿಗೆ ಸಲ್ಲಿಸುವುದು.
6. ಬೀದಿ ದೀಪ, ನೀರು ಸರಬರಾಜು ಹಾಗೂ ನೀರಾವರಿ ಪಂಪ್‌ಸೆಟ್‌ಗಳಿಗೆಂದೇ ಮೀಸಲಿಟ್ಟ ವಿತರಣಾ ಪರಿವರ್ತಕಗಳ ಮಾಪಕ ಓದುವುದು ಹಾಗೂ ಮಾಪಕ ಓದುವಿಕೆಯಲ್ಲಿ ಯಾವುದೇ ವ್ಯತ್ಯಾಸಗಳು ಕಂಡುಬಂದಲ್ಲಿ ಉಪವಿಭಾಗ ಕಛೇರಿಗೆ ವರದಿ ಮಾಡುವುದು.
7. ಯಾವುದೇ ಕಾರಣಕ್ಕೂ ಸ್ಥಾವರದ ವಿದ್ಯುತ್ ಸಂಪರ್ಕವನ್ನು ಕಡಿತಗೊಳಿಸಿದಾಗ ಅಂತಹ ಸ್ಥಾವರದ ಮಾಪಕದಲ್ಲಿ ದಾಖಲಾಗಿರುವ ಅಂತಿಮ ರೀಡಿಂಗ್‌ನ್ನು ಆರ್.ಆರ್ ಸಂಖ್ಯೆ ಅನುಸಾರ ದಾಖಲಿಸಿಕೊಂಡು ನಿಗದಿತ ನಮೂನೆಯ ಪ್ರಕಾರ ಮಾಹಿತಿಯನ್ನು ಸಲ್ಲಿಸಿವುದು.
8. ಕಾಲಕಾಲಕ್ಕೆ ಬೆ.ವಿ.ಕಂ., ವಹಿಸಿಕೊಡುವ ಯಾವುದೇ ಜವಾಬ್ದಾರಿ/ಹೊರೆಯನ್ನು ನಿಭಾಯಿಸುವುದು.
9. ದೀರ್ಘಾವಧಿ ಕಂದಾಯ ಬಾಕಿ ಇರುವ ಸ್ಥಾವರಗಳ ಬಾಕಿ ವಸೂಲು ಮಾಡುವುದು.
10. ವಿದ್ಯುತ್ ಕಳ್ಳತನ, ದುರುಪಯೋಗ ಪ್ರಕರಣಗಳು ಕಂಡುಬಂದಲ್ಲಿ ಮೇಲಾಧಿಕಾರಿಗಳಿಗೆ ವರದಿ ಸಲ್ಲಿಸುವುದು.
11. ವಿದ್ಯುತ್ ಉಳಿತಾಯ ಹಾಗೂ ಸುರಕ್ಷತಾ ಕ್ರಮಗಳನ್ನು ಗ್ರಾಹಕರಿಗೆ ತಿಳಿಹೇಳುವುದು ಮತ್ತು ಜನಸಂಪರ್ಕ ಸಭೆ ಯಶಸ್ವಿಯಾಗಲು ಸಹಕರಿಸುವುದು.
12. "Consumer indexing" ಮಾಡಲು ಸಹಕರಿಸುವುದು. ಮತ್ತು ಎಲ್ಲಾ ಜಕಾತಿ ಸ್ಥಾವರಗಳ "enumeration" ಮಾಡಲು ಸಹಕರಿಸುವುದು.
13. ಹೊಸ ವಿದ್ಯುತ್ ಸಂಪರ್ಕ ಪಡೆಯಲು ಇಚ್ಛಿಸುವ ಸಾರ್ವಜನಿಕರಿಗೆ ಸೂಕ್ತ ಸಹಾಯ ಹಾಗೂ ಮಾರ್ಗದರ್ಶನ ನೀಡಿ ವಿದ್ಯುತ್ ಸಂಪರ್ಕ ಪಡೆಯಲು ಅನುಸರಿಸಬೇಕಾದ ಕಂಪನಿಯ ನಿಯಮಗಳ ಬಗ್ಗೆ ಮಾಹಿತಿ ನೀಡುವುದು.

**ಸಂಭಾವನೆ ಶುಲ್ಕ (ಪ್ರೋತ್ಸಾಹ ಧನ):-**

ಮೈಕ್ರೋ ಫೀಡರ್ ಫ್ರಾಂಚಾಯಿಸಿಗಳಿಗೆ ಈ ಕೆಳಗಿನಂತೆ ಸಂಭಾವನೆ ನೀಡಲಾಗುವುದು

1. ಗ್ರಾಮ ಪಂಚಾಯಿತಿಗೆ ನಿಗದಿ ಪಡಿಸಿರುವ ವಸೂಲಾತಿ ಗುರಿಯನ್ನು ಸಾಧಿಸಿದಾಗ ತಿಂಗಳಿಗೆ ಕನಿಷ್ಟ ಖಚಿತ ಪ್ರೋತ್ಸಾಹ ಧನ ರೂ.12,000/- ಹಾಗೂ ಹೆಚ್ಚಿನ ವಸೂಲಾತಿಗೆ ಹೆಚ್ಚುವರಿ ಪ್ರೋತ್ಸಾಹ ಧನವನ್ನು ಎಂ.ಓ.ಯು ಒಡಂಬಡಿಕೆಯ ಷರತ್ತುಗಳಿಗೊಳಪಟ್ಟು ನೀಡಲಾಗುವುದು.
2. ನೀರಾವರಿ ಪಂಪ್‌ಸೆಟ್‌ಗಳಿಗೆ ವಿದ್ಯುತ್ ಸರಬರಾಜು ಮಾಡುವುದಕ್ಕಾಗಿಯೇ ಮೀಸಲಿಟ್ಟ ವಿತರಣಾ ಪರಿವರ್ತಕಗಳ ಮಾಪಕ ಓದಿದಲ್ಲಿ ಪ್ರತಿ ಸ್ಥಾವರಕ್ಕೆ ರೂ.25/- ನ್ನು ಪಾವತಿಸಲಾಗುವುದು.
3. ಕುಡಿಯುವ ನೀರಿನ ಸ್ಥಾವರ ಮತ್ತು ಬೀದಿ ದೀಪ ಸ್ಥಾವರಗಳ ಮಾಪಕ ಓದಿದಲ್ಲಿ ಪ್ರತಿ ಸ್ಥಾವರಕ್ಕೆ ರೂ.25/- ನ್ನು ಪಾವತಿಸಲಾಗುವುದು

**ದಂಡ:-** ಎಂ.ಎಫ್.ಎಫ್ ಗಳು ಶೇ.100 ರಷ್ಟು ಬಿಲ್ ವಿತರಿಸದಿದ್ದಲ್ಲಿ ಮತ್ತು ಕನಿಷ್ಠ ಮೂಲ ವಸೂಲಾತಿ ಗುರಿಯನ್ನು ಸಾಧಿಸದಿದ್ದಲ್ಲಿ ಅವರಿಗೆ ನೀಡುವ ರೂ. 12,000/- ಗಳ ಕನಿಷ್ಟ ಖಚಿತ ಪ್ರೋತ್ಸಾಹ ಧನದಲ್ಲಿ ಶೇಕಡಾ 5 ರಷ್ಟು ದಂಡ ವಿಧಿಸಲಾಗುವುದು.

ಅಧೀಕ್ಷಕ ಇಂಜಿನಿಯರ್(ವಿ),
ವಾ, ಕಾ ಮತ್ತು ಪಾ ವೃತ್ತ, ಬೆ.ವಿ.ಕಂ., ದಾವಣಗೆರೆ

**ತಿಳುವಳಿಕೆ ಒಡಂಬಡಿಕೆ(ಎಂ.ಓ.ಯು)ಯನ್ನು ರದ್ದು ಮಾಡುವುದು:-**

ಈ ಕೆಳಗಿನ ಸಂದರ್ಭಗಳಲ್ಲಿ ಮೈಕ್ರೋ ಫೀಡರ್ ಫ್ರಾಂಚಾಯಿಸಿ ಮತ್ತು ಬೆ.ವಿ.ಕಂಪನಿಯ ಮಧ್ಯದ ತಿಳುವಳಿಕೆ ಒಡಂಬಡಿಕೆಯನ್ನು ಅಂತ್ಯಗೊಳಿಸಲಾಗುವುದು.

1. ವಸೂಲಾತಿಯಲ್ಲಿ ಸತತ ಮೂರು ತಿಂಗಳು ಪ್ರತಿ ತಿಂಗಳ ಕಂದಾಯ ವಸೂಲಾತಿ ಗುರಿ ಮುಟ್ಟಲು ವಿಫಲವಾದರೆ.
2. ದುರ್ನಡತೆ ಮತ್ತು ಲಂಚ/ರುಷುವತ್ತುಗಳಲ್ಲಿ ನಿರತನಾಗಿದ್ದರೆ.
3. ಸಿಬ್ಬಂದಿ ಮತ್ತು ಗ್ರಾಹಕರೊಡನೆ ಸೌಜನ್ಯತೆಯಿಂದ ನಡೆದುಕೊಳ್ಳದಿರುವ ಬಗ್ಗೆ ದೂರುಗಳು ಬಂದರೆ.
4. ಆಯ್ಕೆಯಾದ ಅಭ್ಯರ್ಥಿಯು ತನ್ನ ಪರವಾಗಿ ಬೇರೆಯವರನ್ನು ನೇಮಿಸಿಕೊಂಡಿದ್ದು ತಿಳಿದು ಬಂದಲ್ಲಿ.
5. ಸತತ ಮೂರು ತಿಂಗಳು ಎಂ.ಎಫ್.ಎಫ್ ಕೆಲಸಕ್ಕೆ ಅನಧಿಕೃತ ಗೈರುಹಾಜರಾದಲ್ಲಿ.

**ತರಬೇತಿ:-**

ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ವತಿಯಿಂದ ವಾಣಿಜ್ಯ ಕಾರ್ಯಾಚರಣೆ ಹಾಗೂ ಸಾಮೂಹಿಕ ಮಧ್ಯವರ್ತಿ ಚಟುವಟಿಕೆ ನಡೆಸುವ ಸಲುವಾಗಿ ಐದು ದಿನದ ಅಲ್ಪ ಕಾಲಾವಧಿಯ ತರಬೇತಿಯನ್ನು ಆಯ್ಕೆಯಾದ ಅಭ್ಯರ್ಥಿಗಳಿಗೆ ಕೊಡಲಾಗುವುದು. ತರಬೇತಿ ವಿಧಾನವು ತರಗತಿ ಕೊಠಡಿ ಜೊತೆಗೆ ಕ್ಷೇತ್ರ ತರಬೇತಿಯಾಗಿರುತ್ತದೆ.

**ಸೂಚನೆ:-**

ಈಗಾಗಲೇ ಎಂ.ಎಫ್.ಎಫ್ ಕೆಲಸಕ್ಕೆ ರಾಜಿನಾಮೆ ನೀಡಿರುವ ಮತ್ತು ಎಂ.ಎಫ್.ಎಫ್ ಕೆಲಸದಲ್ಲಿ ನಿರಾಸಕ್ತಿ/ ಬೇಜವಾಬ್ದಾರಿಯಿಂದಾಗಿ ಕಂಪನಿಯಿಂದ ವಜಾಗೊಳಿಸಲಾಗಿರುವ ಅಭ್ಯರ್ಥಿಗಳು ಪುನಃ ಅರ್ಜಿ ಸಲ್ಲಿಸಲು ಅವಕಾಶವಿರುವುದಿಲ್ಲ.

ಅಧೀಕ್ಷಕ ಇಂಜಿನಿಯರ್(ವಿ),
ವಾ, ಕಾ ಮತ್ತು ಪಾ ವೃತ್ತ, ಬೆ.ವಿ.ಕಂ., ದಾವಣಗೆರೆ

ಅರ್ಜಿಯು ಈ ಕೆಳಗೆ ತಿಳಿಸಿರುವ ನಮೂನೆಯಲ್ಲಿರಬೇಕು:-

ಇತ್ತೀಚಿನ ಭಾವಚಿತ್ರ

1.ಹೆಸರು------------------- ಹಾಗೂ ಮೊಬೈಲ್ ಅಥವಾ ಸ್ಥಿರ ದೂರವಾಣಿ ಸಂಖ್ಯೆ-------------
2.ತಂದೆ ಹೆಸರು--------------------------
3.ಗ್ರಾಮ------------------ ಗ್ರಾ.ಪಂ.------------ ತಾಲ್ಲೂಕು---------ಜಿಲ್ಲೆ ----------
4.ಅರ್ಜಿ ಸಲ್ಲಿಸಿರುವ ಗ್ರಾಮ ಪಂಚಾಯಿತಿ ಹೆಸರು ----------------
5.ಜನ್ಮ ದಿನಾಂಕ -------------------- ಲಿಂಗ-------------
6.ಶೈಕ್ಷಣಿಕ ಅರ್ಹತೆ ------------------------------------
7.ಅನುಭವ ಇದ್ದಲ್ಲಿ -------------------------------------
8.ಬ್ಯಾಂಕ್ ಹೆಸರು ---------------- ಡಿ.ಡಿ.ಮೊತ್ತ ರೂ.250/- ಡಿ.ಡಿ.ಸಂಖ್ಯೆ ----------- ದಿನಾಂಕ -------------
9.ಅಡಕಗಳ ವಿವರ. ಎ) -----------------------
ಬಿ) -----------------------
ಸಿ) -----------------------
ಡಿ) ---------------------

ಅಭ್ಯರ್ಥಿಯ ಸಹಿ

<u>ಅರ್ಜಿ ಸಲ್ಲಿಸಲು ಅಭ್ಯರ್ಥಿಗಳಿಗೆ ಸೂಚನೆ:-</u>

ಆಸಕ್ತ ಅಭ್ಯರ್ಥಿಗಳು ನಿಗದಿತ ಅರ್ಜಿ ನಮೂನೆಯೊಂದಿಗೆ ಈ ಕೆಳಗಿನ ದಾಖಲೆ / ವಿವರಗಳನ್ನು ಸಲ್ಲಿಸಬೇಕು:

1. ರೂ.250/- ಗಳ ರಾಷ್ಟ್ರೀಕೃತ ಬ್ಯಾಂಕ್ ಡಿ.ಡಿ.(ಹಣ ವಾಪಸ್ಸು ಕೊಡಲಾಗುವುದಿಲ್ಲ) ನ್ನು ಲಗತ್ತಿಸುವುದು.
2. ಡಿ.ಡಿ.ಯನ್ನು "Superintending Engineer(Ele), O & M Circle, BESCOM, Davanagere" ರವರ ಹೆಸರಿಗೆ ಪಡೆಯುವುದು
3. ಸಂಬಂಧಿಸಿದ ಗ್ರಾಮ ಪಂಚಾಯಿತಿಯಿಂದ ವಾಸಸ್ಥಾನದ ಪ್ರಮಾಣ ಪತ್ರ.
4. ವಿದ್ಯಾರ್ಹತೆಯ ಬಗ್ಗೆ ಪ್ರಮಾಣಿತ (ದೃಢೀಕೃತ) ದಸ್ತಾವೇಜುಗಳು.
5. ಭರ್ತಿಯಾದ ಅರ್ಜಿಗಳನ್ನು ಮೇಲಿನ ವಿವರಗಳೊಂದಿಗೆ ಈ ಕೆಳಗಿನ ವಿಳಾಸಕ್ಕೆ ಕಳುಹಿಸಬೇಕು. ಅರ್ಜಿಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ: 26.04.2017 ಸಂಜೆ 5.30 ಘಂಟೆಯ ವರೆಗೆ.
6. ಕೊನೆಯ ದಿನಾಂಕದ ನಂತರ ತಲುಪಿದ ಹಾಗೂ ಅಪೂರ್ಣ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ.
7. ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ – www.bescom.org

<u>ಅರ್ಜಿ ಸಲ್ಲಿಸುವ ವಿಳಾಸ:</u>

**ಅಧೀಕ್ಷಕ ಅಭಿಯಂತರರು(ವಿ)**
**ಕಾರ್ಯ ಮತ್ತು ಪಾಲನಾ ವೃತ್ತ ಕಚೇರಿ,**
**ಬೆ.ವಿ.ಕಂ., ಹದಡಿ ರಸ್ತೆ,**
**ದಾವಣಗೆರೆ – 577 002.**

31/3/17

ಅಧೀಕ್ಷಕ ಇಂಜಿನಿಯರ್(ವಿ)
ವಾ, ಕಾ ಮತ್ತು ಪಾ ವೃತ್ತ ಬೆ.ವಿ.ಕಂ., ದಾವಣಗೆರೆ